**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 01 K–ಪ್ರಥಮ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 100** **ಸಮಯ : 03.15ಗಂಟೆಗಳು**

****************************************************************************************

## ಅಭ್ಯಾಸ ಪತ್ರಿಕೆ–2

****************************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6X1=6**

1. ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.
   (ಎ) ಭಾವಸೂಚಕ (ಬಿ) ಪೂರ್ಣವಿರಾಮ
   (ಸಿ) ಉದ್ಧರಣ (ಡಿ) ಆವರಣ
2. 'ವಾಚನಾಲಯ' ಪದದಲ್ಲಿ ಆಗಿರುವ ಸಂಧಿ;
   (ಎ) ಸವರ್ಣದೀರ್ಘ (ಬಿ) ವೃದ್ಧಿ
   (ಸಿ) ಜಶ್ತ್ವ (ಡಿ) ಗುಣ
3. 'ರಾಮಲಕ್ಷ್ಮಣರು' ಪದವು ಈ ಸಮಾಸಕ್ಕೆ ಉದಾಹರಣೆ:
   (ಎ) ಅಂಶಿ ಸಮಾಸ (ಬಿ) ದ್ವಿಗು ಸಮಾಸ
   (ಸಿ) ಬಹುವ್ರೀಹಿ ಸಮಾಸ (ಡಿ) ದ್ವಂದ್ವ ಸಮಾಸ
4. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂಥ ವಾಕ್ಯವನ್ನು
   (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
   (ಸಿ) ಮಿಶ್ರವಾಕ್ಯ (ಡಿ) ಪ್ರಧಾನ ವಾಕ್ಯ
5. ಪಂಚಮಿ ವಿಭಕ್ತಿಯ ಕಾರಕಾರ್ಥವಿದು:
   (ಎ) ಕರ್ತೃ (ಬಿ) ಅಪಾದಾನ
   (ಸಿ) ಕರಣಾರ್ಥ (ಡಿ) ಸಂಪ್ರದಾನ
6. 'ಹೇಳಲಿಕ್ಕೆ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.
   (ಎ) ಕೃದಂತ (ಬಿ) ಕೃದಂತ ಭಾವನಾಮ
   (ಸಿ) ಕೃದಂತಾವ್ಯಯ (ಡಿ) ತದ್ಧಿತಾಂತ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4X1= 4**

7. ಪರೀಕ್ಷಿಸು : ಪರಿಕಿಸು :: ವರ್ಣ : ______________________
8. ಹಚ್ಚೋಣ : ವಿದ್ಯರ್ಥಕ :: ಬಂದೀತು : ____________________
9. ಕಾವೇರಿ : ಅಂಕಿತ ನಾಮ :: ನಗರ : ___________________
10. ಹೌದೌದು : ದ್ವಿರುಕ್ತಿ :: ಮನೆಮಠ : ____________________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7X1=7**

11. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
12. 'ಶಿವಾನುಭವ ಶಬ್ಧಕೋಶ'ಪುಸ್ತಕವನ್ನು ಬರೆದವರು ಯಾರು?
13. ಬೆಳ್ಗೊಡೆಯ ಅಡಿಯಲ್ಲಿ ಯಾವುದು ಕಾಣುವುದಿಲ್ಲ?
14. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತು ಹೇಗೆ ಕಳೆದನು?

15. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?
16. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
17. ಪೈಗಳು ಬರೆದ ಮೊದಲ ಯಕ್ಷಗಾನದ ಪ್ರಸಂಗದ ಹೆಸರೇನು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10x2=20**

18. ಮೊಗ್ಗನ್ನು ಆದರ್ಶವಾಗಿ ಸ್ವೀಕರಿಸಲು ಇರುವ ತೊಡಕುಗಳೇನು?
19. ಮನುಷ್ಯನು ತನ್ನ ಒಳಿತನ್ನು ಹೇಗೆ ಸಾಧಿಸಬಹುದು?
20. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳು ಯಾವುವು?
21. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
22. ಕವಿಗೆ ಯಾವು ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?
23. ಪಾರ್ಥ ಭೀಮರ ಬಗ್ಗೆ ದುರ್ಯೋಧನನ ಅಭಿಪ್ರಾಯವೇನು?
24. ಕ್ರಿಯಾ ಸ್ವಾತಂತ್ರ್ಯ ಎಂದರೇನು?
25. 'ವಸಂತ ಮುಖ ತೋರಲಿಲ್ಲ' ಪದ್ಯದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
26. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಬರೆಯಿರಿ.
27. ಕ್ರಾಂತಿಕಾರಿಗಳ ಪ್ರಾಣಾರ್ಪಣೆ ಮುಂದಿನ ದಿನಗಳಲ್ಲಿ ಭಾರತೀಯರಿಗೆ ಯಾವ ಬಗೆಯಲ್ಲಿ ಪ್ರೇರಣೆ ಕೊಟ್ಟಿತು?

**V. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2X3=6**

28. ಪು.ತಿ.ನ
29. ಕುಮಾರವ್ಯಾಸ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1x3=3**

30. ಪುಟ್ಟಿದನೂರ್ವರುಮೆನ್ನೊಡ
ವುಟ್ಟಿದ ನೂರ್ವರುಮಿದಿರ್ಚೆ ಸತ್ತೊಡೆ ಕೋಪಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1x3=3**

31. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1x3=3**

32. ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.

**ಅಥವಾ**

ಕಟ್ಟುವುದು ಕಠಿಣ; ಕೆಡಹುವುದು ಸುಲಭ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x3=18**

33. "ಗುರೂಪದೇಶ ಎಂದರೆ ತಲೆನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು'
34. "ಹಾಗಾದರೆ ಎಲ್ಲರಿಗೂ ಮನೆಯಾಗುವವರೆಗೆ ನನಗೂ ಮನೆ ಬೇಡ"
35. "ಹುಸಿಯದ ಬೇಹಾರಿಯೇ ಇಲ್ಲ"
36. "ಜಾನಕಿಯ ಮಗನಿದಕೆ ಬೆದರುವನೆ"
37. "ನೆಲಕಿರಿವೆನೆಂದು ಬಗೆದಿರೆ ಚಲಕಿರಿವೆಂ"
38. "ಈಗಳೊಂದು ಅಡಕೆಯುಮಿಲ್ಲ ಕೈಯೊಳ್"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1x4=4**

39. ಕಲುಷಿತವಾದೀ ________________

________________________

________________________

______________ ಮುಟ್ಟೋಣ ।

**ಅಥವಾ**

ಮತಗಳೆಲ್ಲವೂ ____________________

______________________________

______________________________

_______________________ಬಿತ್ತೋಣ ।

**XI.ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1x4=4**

40. **ಇರುಳಿರುಳಳಿದು ದಿನ ದಿನ ಬೆಳಗೆ**

**ಸುತ್ತಮುತ್ತಲೂ ಮೇಲಕೆ ಕೆಳಗೆ**

**ಗಾವುದ ಗಾವುದ ಗಾವುದ ಮುಂದೆ**

**ಎವೆತೆರೆದಿಕ್ಕುವ ಹೊತ್ತಿನ ಒಳಗೆ**

**ಹಕ್ಕಿ ಹಾರುತಿದೆ ನೋಡಿದಿರಾ?**

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x4=8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

**ಅಥವಾ**

ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

42. ಹಲಗಲಿ ದಂಗೆಗೆ ಕಾರಣವೇನು? ಸರ್ಕಾರ ಅದನ್ನು ಹೇಗೆ ನಿಯಂತ್ರಿಸಿತು?

**ಅಥವಾ**

ಹಲಗಲಿ ದಂಗೆಯ ಪರಿಣಾಮವೇನು?

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1 x 4=4 (2+2)**

ಕನ್ನಡ ನಾಡಿನ ಶರಣರ ವಚನ ಚಳುವಳಿ ಎಂದ ಕೂಡಲೇ ಅದು ಜಾತಿ, ಮತ ಭೇದವಳಿಸಿ ಸರ್ವಸಮಾನತೆಯನ್ನು ತೋರಿದುದು. ಅದು ಇಂದಿಗೂ ಕನ್ನಡ ಮನಸ್ಸಿನ ಪ್ರಗತಿಪರತೆಯ ದ್ಯೋತಕವಾಗಿದೆ. ಇಂದಿನ ಪ್ರಗತಿಪರ ಚಿಂತನೆ ಆಗಾಗ್ಗೆ ವಚನ ಚಳುವಳಿಯ ಕಡೆಗೆ ಮಹಾತ್ವಾಕಾಂಕ್ಷೆಯಿಂದ ತಿರುಗಿ ನೋಡುವಂತೆ ಮಾಡಿದೆ. ವಚನ ಚಳುವಳಿಯಲ್ಲಿ ಧಾರ್ಮಿಕ ಕ್ರಾಂತಿಯೊಡನೆ ಸಾಮಾಜಿಕ ಸುಧಾರಣೆಯೂ ಸೇರಿಕೊಂಡಿದೆ. ಇಂತಹ ಪ್ರಭಾವಗಳ ಮಧ್ಯೆ ಮತಪ್ರಚಾರ ಮತ್ತು ಸಂಘರ್ಷ ಭಿನ್ನವಾಗಿಯೇ ದಾಖಲಾಗಿದೆ. ದುರಾಚಾರದ ಖಂಡನೆಯಾಗಿ, ಮೌಢ್ಯದ ಖಂಡನೆಯಾಗಿ ಬರುತ್ತದೆ. ಜನಪದ ಧಾರ್ಮಿಕ ಆಚರಣೆಗಳು ಹೆಚ್ಚಾಗಿ ಅವುಗಳ ದಾಳಿಗೀಡಾಗಿವೆ. ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ವಚನ ಚಳುವಳಿಯ ಹಾದಿ ಮರೆತು ಹೋಗಿದೆ. ಎಂಬ ಭಾವನೆ ಮೂಡುತ್ತದೆ. ಬೇರೆ ಬೇರೆ ಮತಗಳ ಸುಸಂಗತ ವಿಚಾರಗಳನ್ನು, ಸಂಸ್ಕೃತಿ ಆಚರಣೆಗಳನ್ನು ಸಹ ಸಂಪೂರ್ಣವಾಗಿ ಸಹಿಸಿಕೊಳ್ಳಲು ಸಮರ್ಥರಾಗಿ ನಮ್ಮ ಆಚಾರ ವಿಚಾರಗಳನ್ನು ಬೇರೆಡೆಗೆ ಪಸರಿಸಿ ಸರ್ವ ಸಮಭಾವ ನೆಲೆಯಲ್ಲಿ ಸಾಗುವುದು ಕನ್ನಡಿಗರ ವಿವೇಕ. ಅದು ಎಲ್ಲರ ಮನಗಳನ್ನು ಬೆಳಗಲಿ.

**ಪ್ರಶ್ನೆಗಳು:**

**43.** ಅ) ಕನ್ನಡಿಗರ ವಿವೇಕ ಏನಾಗಿರಬೇಕು?

ಬ) ವಚನ ಚಳುವಳಿಯ ಪ್ರಭಾವವೇನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ, ಪತ್ರ ಬರೆಯಿರಿ.** **1x5=5**

**44.** ನಿಮ್ಮನ್ನು ಬಾಗಲಕೋಟೆ ಜಿಲ್ಲೆಯ ಮುದ್ದೇಬಿಹಾಳ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ/ನಿ 'ರೋಹಿತ್'/ ರೋಹಿಣಿ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಕೈಗೊಂಡ ವಾರ್ಷಿಕೋತ್ಸವ ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಸಚಿನ್/ ಸೃಜನ ಎಂದು ಭಾವಿಸಿ ನಿಮ್ಮ ಬಡಾವಣೆಯಲ್ಲಿ ಶುದ್ಧನೀರಿನ ಘಟಕ ಸ್ಥಾಪಿಸುವಂತೆ ಕೋರಿ ನಗರಸಭಾ ಅಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

**XV.** **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1x5=5**

**45.**ಸ್ವಚ್ಛಭಾರತ ಅಭಿಯಾನ.

**ಅಥವಾ**

ರಾಷ್ಟ್ರೀಯ ಹಬ್ಬಗಳ ಮಹತ್ವ

※※※※※